ಅಯ್ಯ ಗಪ್ಪಣ್ಣ ಆ ಮುರದ ಒಲೆ ಹತ್ರ ನಾಯಿ ಬೆಕ್ಕು ಬಿದ್ದುಕೊಂಡಿರ್ತಾವೆ ನೀ ಇಲ್ಯಾಕೆ ಕೂತೆ? ಎಂದಳು. ಗಪ್ಪಣ್ಣ ಬಹಳ ಶಾಂತವಾಗಿ ಆದರೆ ಅಷ್ಟೇ ನಿಶ್ಚಿತವಾಗಿ ಉತ್ತರಿಸಿದ. ಅತ್ಗೆ ಈಗಾಗಲೇ ಮೂಗು ಮತ್ತೆ ಕಣ್ಣಿಗೆ ಪೆಟ್ಟು ಬಿದ್ದು ಮಕ ಬಾತು ಹನುಮಂತನ ಅವತಾರ ಆಗದೆ. ಈ ಸಲ ಮಂಚದ ಮೇಲೆ ಮನಗಿದವರ ತೂಕ ಅಡಿಕೆ ಚೀಲಕ್ಕಿಂತ ಹೆಚ್ಚು. ಹಂಗಾಗಿ ಈ ಸಲ ಅವರು ಬಿದ್ದಾಗ ನಾ ಉಳಿಯು ನಮೂನಿ ಕಾಣುದಿಲ್ಲ. ಬದುಕುಳಿದರೆ ಬೇಡಕಂಡಾದ್ರೂ ತಿನ್ನಬಹುದು. ಅವನ ಮಾತು ಕೇಳಿ ಮನ ನೊಂದ ಅಜ್ಜಿ ಹಂಗೆಲ್ಲ ಎಂತ ಮಾತಾಡ್ತಿಯಾ ಮಾರಾಯ, ಮೆತ್ತಿಗೆ ಹೋಗು ಅಲ್ಲಿ ನಮ್ಮ ಮನಿಯವ್ರು ಮನಗಾರೆ ನೋಡು ನಿನ್ನ ಹಸೆ ತಗಂಡು ಮೆತ್ತಿ ಹತ್ತು ಎಂದು ಕಳಿಸಿದಳು. ಹೀಗೆ ಅರ್ಧ ರಾತ್ರಿಯಲ್ಲಿ ಅಟ್ಟ ಹತ್ತಿದ ಗಪ್ಪಣ್ಣ ಉರಿಯುತ್ತಿರುವ ಮೂಗು ಮತ್ತು ಉಳುಕಿನ ನೋವಿನಿಂದ ನರಳುತ್ತಿದ್ದ ಕತ್ತನ್ನು ತಹಬಂದಿಗೆ ತರಲೆತ್ನಿಸುತ್ತ ಮಲಗಿದ. ಇನ್ನೇನು ಕಣ್ಣು ಮುಚ್ಚಬೇಕು ಅನ್ನುವಷ್ಟರಲ್ಲಿ ಏಕಕಾಲದಲ್ಲಿ ನಾಟಾ ಲೋಡಾದ ಹನ್ನೆರಡು ಲಾರಿಗಳು ದೇವಿಮನೆ ಘಟ್ಟದ ಏರಿಕೆ ಹತ್ತುವಂತಹ ಸಪ್ಪಳ ಕೇಳಿ ಬೆಚ್ಚಿ ಎದ್ದು ಕೂತ. ಮೆತ್ತಿಯ ಮಂಚದ ಮೇಲೆ ಮಲಗಿದ್ದ ನಮ್ಮ ಅಜ್ಜಯ್ಯ ಗೊರಕಾಸುರ. ಅಯ್ಯೊ ದೇವರೇ ಈಗೇನು ಗತಿ ಎಂದು ಲೈಟು ಹಚ್ಚಿದ. ಮಂಚದ ಕೆಳಗಿನ ಸಾಲಲ್ಲಿ ಮೊದಲನೆಯವರಾಗಿ ಮಲಗಿದ್ದ ಭಟ್ಟರು ದೀಪದ ಬೆಳಕಿಗೆ ಕಣ್ಣು ಬಿಟ್ಟವರು ತಮ್ಮ ಚೀಲದಿಂದ ಹತ್ತಿ ಮುದ್ದೆ ತೆಗೆದುಕೊಟ್ಟು ಕಿವಿಗೆ ತುರುಕಿಕೊಂಡು ಮಲಗಿ. ನಾನು ಹಾಗೇ ಮಾಡಿದ್ದೆ. ದಿನಾ ಒಬ್ಬೊಬ್ಬರ ಮನೆಯಲ್ಲಿ ಮದುವೆ ಮಾಡಿಸಲು ಹೋಗಿ ಮಲಗಿಕೊಳ್ಳಬೇಕಾದ ಹಣೆಬರಹ ನಮ್ಮದು ಹಾಗಾಗಿ ಎಲ್ಲಕ್ಕೂ ಉಪಾಯವಿದೆ. ಎಂದು ಶಾಲನ್ನು ಮುಸುಗಿಕ್ಕೆ ಮಲಗಿದರು. ಲೈಟು ಆರಿಸಿ, ಕಿವಿಗೆ ಹತ್ತಿ ತುರುಕಿಕೊಂಡು ಅದು ಬೀಳದಂತೆ ಪಾಣಿಪಂಚೆಯನ್ನು ಬಿಗಿಯಾಗಿ ಕಟ್ಟಿಕೊಂಡು ಮಲಗಿದ ಗಪ್ಪಣ್ಣನಿಗೆ ದೂರದಿಂದ ಗೊರಗೊರ ಅಂದಂತೆ ಕೇಳಿಸಿದರೂ ನಿದ್ದೆ ಹತ್ತಿತು. ಗಾಢವಾದ ನಿದ್ದೆ ಆವರಿಸತೊಡಗಿತು ಎನ್ನುವ ಹೊತ್ತಿಗೆ ಭೀಕರವಾದ ಆನೆಗಳ ಹಿಂಡಿನ ಕಾಲ್ತುಳಿತಕ್ಕೆ ಸಿಕ್ಕಂತೆ ವೇದನೆಯಾಗತೊಡಗಿತು. ಅವನ ಆಚೀಚೆ ಮಲಗಿದವರೂ ಕೂಡ ಅಯ್ಯೋ ಎಂದು ನೋವಿನ ಧ್ವನಿ ಮಾಡುತ್ತಿದ್ದರು. ಅಜ್ಜನ ಮೊಮ್ಮಗ ಅಂದರೆ ನನ್ನ ತಮ್ಮನಿಗೆ ಕಂಡಾಪಟ್ಟೆ ಕ್ರಿಕೆಟ್ ಹುಚ್ಚು. ಬೆಳಗಿಂದ ರಾತ್ರಿಯ ತನಕ ಬಯಲಿನಲ್ಲೇ ಆಡುವವನನ್ನು ಕತ್ತಲಾದ ಮೇಲೆ ಒತ್ತಾಯದಿಂದ ದರದರ ಎಳೆತಂದು ಹೆದರಿಸಿ ಬೈದು ಊಟ ಮಾಡಿಸಿ ಮಲಗಿಸುತ್ತಿದ್ದರು. ಮನೆಯೊಳಗೂ ಕೂಡ ನಿಂತಲ್ಲಿ ಕೂತಲ್ಲಿ ಬಾಯಲ್ಲಿ ಕಾಮೆಂಟರಿ ಹೇಳುತ್ತ ಕೈಯಿಂದ ಬ್ಯಾಟು ಹೊಡೆದಂತೆ ನಟಿಸುತ್ತ ಕ್ರಿಕೆಟ್ ಜಗತ್ತಿನಲ್ಲೇ ಜೀವಿಸಿದ್ದ ಅವನಿಗೆ ನಿದ್ದೆಯಲ್ಲೂ ಆಟವಾಡಿದಂತೆ ಕನಸು ಬೀಳುತ್ತಿತ್ತು. ಆವತ್ತು ಮೆತ್ತಿಯಲ್ಲಿ ಗೋಡೆ ತುದಿಗೆ ಮಲಗಿದವನು ರಾತ್ರಿ ಕನಸಿನಲ್ಲಿ ಬ್ಯಾಟಿಂಗ್ ಮಾಡಿದ್ದಾನೆ. ಬಾಲು ಹಿಡಿದು ತರುವಷ್ಟರಲ್ಲಿ ಓಡಿ ರನ್ ಮಾಡಿದರಾಯಿತು ಅಂತ ಓಡಿದ್ದಾನೆ. ಎದ್ದು ಆ ಕಡೆ ತುದಿಯ ಬಾಗಿಲವರೆಗೆ ಓಡಿ ಮತ್ತೆ ಹಿಂತಿರುಗಿ ಓಡಿ ಬಂದು ಮಲಗಿದ್ದಾನೆ. ಸಾಲಾಗಿ ಮಲಗಿದವರಲ್ಲಿ ಬಹುತೇಕರು ವಯಸ್ಸಾದವರು. ಕೆಲವರ ಹೊಟ್ಟೆ ಕೆಲವರ ಎದೆ ಹೀಗೆ ತಮ್ಮನ ಕಾಲ್ತುಳಿತಕ್ಕೆ ಅಪ್ಪಚ್ಚಿಯಾದ ಅಂಗಾಂಗಗಳ ನೋವನ್ನು ತಡೆಯುವುದು ಸಾಧ್ಯವಾಗದೇ ನರಳತೊಡಗಿದರು. ನನ್ನ ತಮ್ಮನೋ ವಯಸ್ಸು ಸಣ್ಣದಿದ್ದರೂ ದಾಂಡಿಗ, ಅದರಲ್ಲೂ ತುರುಸಿನ ಮ್ಯಾಚಿನಲ್ಲಿ ಗೆಲ್ಲುವ ಹುಮ್ಮಸ್ಸಿನಲ್ಲಿ ಅಷ್ಟೂ ಶಕ್ತಿ ಹಾಕಿ ಆಡುತ್ತಿದ್ದಾನೆ. ಇನ್ನೆಷ್ಟು ಬಾಲಿದೆಯೋ ಏನೋ? ಇನ್ನೆಷ್ಟು ರನ್ನು ಬೇಕಾಗಿದೆಯೊ ಏನೋ? ಪ್ರತಿ ಬಾಲಿಗೆ ಎರಡೆರಡು ಸಲ ತುಳಿಸಿಕೊಂಡರೆ ಬೆಳಗಿನವರೆಗೆ ಸಾಲಾಗಿ ಅರ್ಧ ಡಜನ್ನು ಹೆಣ ಬೀಳುವುದು ಗ್ಯಾರಂಟಿ. ಗಪ್ಪಣ್ಣ ಮತ್ತು ಭಟ್ಟರು ಮುಖ ನೋಡಿಕೊಂಡರು. ಕಣ್ಣಲ್ಲಿಯೇ ಒಬ್ಬರಿಗೊಬ್ಬರು ಸೂಚನೆ ಕೊಟ್ಟುಕೊಂಡರು. ನನ್ನ ತಮ್ಮನ ಹಸೆಯ ಹತ್ತಿರ ಹೋಗಿ ಆ ತುದಿಗೆ ಒಬ್ಬರು ಈ ತುದಿಗೆ ಒಬ್ಬರು ನಿಂತರು. ಅನಾಮತ್ತಾಗಿ ಹಸೆಯ ಸಮೇತ ಅವನನ್ನು ಎತ್ತಿಕೊಂಡು ಒಳ ಮೆತ್ತಿಗೆ ಒಯ್ದರು. ಅಲ್ಲಿ ಸಾಲಾಗಿ ಕವ್ವ, ಚಿಕ್ಕಿ, ಅತ್ತಿಗೆಯರು ಮಲಗಿದ್ದರು. ಸ್ವಲ್ಪ ಸ್ಥಳ ಕಂಡಲ್ಲಿ ಅವನನ್ನು ಮಲಗಿಸಿ ಒಳಮೆತ್ತಿಯ ಬಾಗಿಲನ್ನು ಗಟ್ಟಿಯಾಗಿ ಹಾಕಿಕೊಂಡು ಬಂದು ಮಲಗಿದರು. ಮುಂದೆ ಹತ್ತೇ ನಿಮಿಷದಲ್ಲಿ ಒಳಗೆ ಕ್ರಿಕೆಟ್ ಮ್ಯಾಚ್ ಶುರುವಾಯಿತು. ಆದರೆ ತಮ್ಮ ಬಿದ್ದಲ್ಲಿಯೇ ಅರಚು ಧ್ವನಿಯಲ್ಲಿ ಕಮೆಂಟರಿ ಹೇಳಿದನೇ ಹೊರತು ರನ್ ಮಾಡಲಿಲ್ಲ. ಯಾಕೆಂದರೆ ಅವನ ಪಕ್ಕ ಮಲಗಿದ್ದವಳು